ಮಾಡಿದರು, ಮತ್ತೆ ಪ್ರಾರಂಭದಿಂದ estimate ಮಾಡಿ approval ತೆಗೆದುಕೊಂಡು tender ಮಾಡಿ soil test ಮಾಡಿ ಮತ್ತೆ ಮಾಡುವುದಕ್ಕೆ ಎರಡು ವರ್ಷ ಹಿಡಿಯಿತು. ಸರ್ಕಾರದ ಯೋಜನೆ ಹೇಗೆ ಆಗಿದೆ ಎಂದರೆ, ಹಣ ಇದ್ದು First Grade College ಗಳ ಕಟ್ಟಡಗಳು ವಿನಾ ಕಾರಣ ಎರಡು ವರ್ಷ ಮುಂದಕ್ಕೆ ಹೋದವು. ಇದರ ಪರಿಣಾಮ ಏನಾಗಿದೆ ಎಂದರೆ, escalation cost ಜಾಸ್ತಿಯಾಗಿ ಕಟ್ಟಡದ ಪ್ರಮಾಣದಲ್ಲಿ 4 ಕೊಠಡಿ ಕಟ್ಟುವ ಕಡೆ 2 ಕೊಠಡಿ ಕಟ್ಟುವ ಸ್ಥಿತಿಗೆ ಬಂತು. ಇದು ಆಡಳಿತದಲ್ಲಿ ಆದಂಥ ಕೆಲವು ಬದಲಾವಣೆಗಳಿಂದ ಈ ರೀತಿ ವಿಳಂಬವಾಗಿದೆ. ಇದು ವಾಸ್ತವವಾದ ವಿಚಾರ. ಇನ್ನು ಮುಂದೆಯಾದರೂ ಅವುಗಳನ್ನು ಆದಷ್ಟು ಬೇಗನೆ ಕಟ್ಟಿಸಿ ಪ್ರಾರಂಭಿಸುವುದಕ್ಕೆ ತಾವು ಹೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಕಟ್ಟಡ ಕಟ್ಟುವುದಕ್ಕೆ ನಾವು ಸೂಚಿಸಿದ್ದೇವೆ.

ಸರ್ಕಾರಿ ಪದವಿ ಪೂರ್ವ ಕಾಲೇಜು ಸ್ಥಾಪನೆ

39 (720) ಶ್ರೀ ಶಿವಶಂಕರರೆಡ್ಡಿ ಎನ್.ಹೆಚ್. (ಗೌರಿಬಿದನೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನ ಮಂಚೇನಹಳ್ಳಿ ಮತ್ತು ತೊಂಡೇಬಾವಿಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ತೆರೆಯಲು ತೆಗೆದುಕೊಂಡಿರುವ ಕ್ರಮಗಳೇನು;

ಆ) ಗೌರಿಬಿದನೂರಿನಲ್ಲಿ ಈ ಪದವಿ ಪೂರ್ವ ಕಾಲೇಜುಗಳನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸ್ಥಾಪನೆ ಮಾಡುವುದು ಅಗತ್ಯವಾಗಿರುವುದರಿಂದ ಈ ಕಾಲೇಜು ಸ್ಥಾಪನೆ ಬಗ್ಗೆ ಸರ್ಕಾರವು ಆಸಕ್ತಿ ವಹಿಸಿರುವುದೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಗೌರಿಬಿದನೂರು ತಾಲ್ಲೂಕಿನ ಮಂಚೇನಹಳ್ಳಿ ಮತ್ತು ತೊಂಡೇಬಾವಿ ಗ್ರಾಮಗಳಲ್ಲಿ ತಲಾ ಒಂದೊಂದು ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಆದುದರಿಂದ ಸರ್ಕಾರಿ ಪದವಿ ಪೂರ್ವ ಕಾಲೇಜು ತೆರೆಯುವ ಅಗತ್ಯತೆ ಕಂಡು ಬರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಪ್ರಶ್ನೆ ಸಂಖ್ಯೆ 39 (720)

ಶ್ರೀ ಎನ್.ಸಂಪಂಗಿ (ಶಿವಶಂಕರರೆಡ್ಡಿ ಎನ್.ಹೆಚ್. ಇವರ ಪರವಾಗಿ) : ನಮ್ಮ ಪ್ರಶ್ನೆಗೆ ಮಂಚೇನಹಳ್ಳಿ ಮತ್ತು ತೊಂಡೇಬಾವಿ ಗ್ರಾಮಗಳಲ್ಲಿ ತಲಾ ಒಂದೊಂದು ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ ಎಂದು ಉತ್ತರ ಕೊಟ್ಟಿದ್ದಾರೆ. ಆದುದರಿಂದ ಸರ್ಕಾರಿ ಪದವಿ ಪೂರ್ವ ಕಾಲೇಜು ತೆರೆಯುವ ಅಗತ್ಯತೆ ಕಂಡು ಬರುವುದಿಲ್ಲವೆಂದು ಹೇಳಿದ್ದಾರೆ. ಅಂದರೆ, ಇವರ ಉದ್ದೇಶ ಏನೆಂದರೆ, Private College ಗಳನ್ನು ಇವರೇ ತೆರೆಸುತ್ತಿದ್ದಾರೆ. ಖಾಸಗಿ ಕಾಲೇಜು ಇದೆ ಎಂದು ಎಲ್ಲಿಯೂ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಹಿಂದುಳಿದ ಪ್ರದೇಶಗಳೆಂದು ಏನು ಇವೆ, ಡಾ:ನಂಜುಂಡಪ್ಪನವರ ವರದಿ ಪ್ರಕಾರ ಗೌರಿಬಿದನೂರು ಇರಬಹುದು, ಬಾಗೇಪಲ್ಲಿ ಇರಬಹುದು, ಚಿಕ್ಕಬಳ್ಳಾಪುರ ಇರಬಹುದು, ಇಲ್ಲಿ ಹೆಚ್ಚಿಗೆ ಸರ್ಕಾರಿ ಕಾಲೇಜುಗಳನ್ನು ಪ್ರಾರಂಭಿಸುವುದಕ್ಕೆ ಏಕೆ ಸಾಧ್ಯವಿಲ್ಲವೆಂದು ನಾನು ಕೇಳುತ್ತಿದ್ದೇನೆ.

ಇವತ್ತಿನ ದಿವಸ ಸರ್ಕಾರ ಕೊಡುತ್ತಿರುವ ಅನುದಾನ ಕೂಡ ಬಹಳ ಕಡಿಮೆ ಇದೆ. ಖಾಸಗಿ ಅನುದಾನಿತ ಸಂಸ್ಥೆಗಳಲ್ಲಿ ಮಕ್ಕಳು ಶುಲ್ಕವನ್ನು ಕಟ್ಟಿ ವಿದ್ಯಾಭ್ಯಾಸ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ಮಾನ್ಯ ಮಂತ್ರಿಯವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಶಂಕರರೆಡ್ಡಿಯವರ ಪರವಾಗಿ ಮಾನ್ಯ ಎನ್. ಸಂಪಂಗಿಯವರು ಮಂಚೇನಹಳ್ಳಿ ಮತ್ತು ತೊಂಡೇಬಾವಿ ಗ್ರಾಮಗಳಲ್ಲಿ ಜೂನಿಯರ್ ಕಾಲೇಜು ಪ್ರಾರಂಭ ಮಾಡಬೇಕೆಂಬ ಪ್ರಶ್ನೆಯನ್ನು ಕೇಳಿದ್ದಾರೆ. ಆದರೆ, ಈ ಎರಡು ಗ್ರಾಮಗಳಲ್ಲಿ ಈಗಾಗಲೇ ಅನುದಾನಿತ ಖಾಸಗಿ ಕಾಲೇಜು ಇರುವುದರಿಂದ ಅಲ್ಲಿಗೆ ಸರ್ಕಾರದ ಜೂನಿಯರ್ ಕಾಲೇಜು ಕೊಡತಕ್ಕಂಥ ಅಗತ್ಯತೆ ಈಗ ಇಲ್ಲವೆಂದು ಹೇಳಿದ್ದೇವೆ. ಖಾಸಗಿ ಕಾಲೇಜಿನವರು ಹೆಚ್ಚು ಡೊನೇಷನ್ ಅಥವಾ ಬೇರೆ ಬೇರೆ ರೀತಿಯ ಶುಲ್ಕವನ್ನು ಹೆಚ್ಚು ತೆಗೆದುಕೊಳ್ಳುವುದರಿಂದ ಮಕ್ಕಳಿಗೆ ಇಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಅಲ್ಲಿ ಸರ್ಕಾರಿ ಕಾಲೇಜು ಪ್ರಾರಂಭ ಮಾಡಿದರೆ ಸರಿ ಹೋಗುತ್ತದೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅನುದಾನಿತ ಖಾಸಗಿ ಸಂಸ್ಥೆ ಯಾವುದೇ ಇದ್ದರೂ ಸಹ ನಮ್ಮ ಸರ್ಕಾರಿ ನಿಯಮಾವಳಿಗಳಂತೆ ಶುಲ್ಕವನ್ನು ವಸೂಲ್ಮಾಡ ಬೇಕೆಂದು ನಾವು ಮೇಲಿಂದ ಮೇಲೆ ಸುತ್ತೋಲೆಗಳ ಮೂಲಕ ತಿಳಿಸು

ತ್ತಿದ್ದೇವೆ. ಆದರೂ ಸಹ ಎಲ್ಲಿಯಾದರೂ ಹೆಚ್ಚು ಶುಲ್ಕವನ್ನು ಅಥವಾ ಬೇರೆ ರೀತಿಯಲ್ಲಿ ಹಣವನ್ನು ವಸೂಲ್ಮಾಡಿದ ಬಗ್ಗೆ ದೂರನ್ನು ಸಲ್ಲಿಸಿದರೆ ಆ ದೂರಿನ ಮೇಲೆ ನಾವು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಜಿಲ್ಲಾ ಮಟ್ಟದಲ್ಲಿ ಡಿ.ಸಿ. ಯವರಿಗೂ ಕೂಡ ದೂರು ಸಲ್ಲಿಸಬಹುದು. ಅವರೂ ಕೂಡ ಇದರ ಪರಿಶೀಲನೆ ಮಾಡುತ್ತಾರೆ. ನಮ್ಮ ಇಲಾಖೆಯಲ್ಲಿಯೂ ಕೂಡ ಬೇರೆ ಬೇರೆ ಹಂತದಲ್ಲಿ ಪರಿಶೀಲನೆ ಮಾಡುತ್ತೇವೆ. ಮಕ್ಕಳಿಗೆ ಶಿಕ್ಷಣ ಬಹಳ ಅಮೂಲ್ಯವಾಗಿರುವುದರಿಂದ ಶಿಕ್ಷಣ ಒಳ್ಳೆಯ ರೀತಿಯಲ್ಲಿ ಸಿಗಬೇಕೆಂಬುದರ ಬಗ್ಗೆ ಸರ್ಕಾರದ ಎಲ್ಲಾ ಪ್ರಯತ್ನಗಳು ಇವೆ. ಖಾಸಗಿ ಸಂಸ್ಥೆಯವರು ಎಲ್ಲಿಯಾದರೂ ಮಿತಿ ಮೀರಿ ಹಣ ವಸೂಲ್ಮಾಡುವ ಬಗ್ಗೆ ದೂರನ್ನು ಸಲ್ಲಿಸಿದರೆ ಅದರ ಮೇಲೆ ನಿಶ್ಚಿತವಾಗಿ ಉಗ್ರವಾದ ಕ್ರಮವನ್ನು ತೆಗೆದು ಕೊಳ್ಳುತ್ತೇವೆ.

ಶ್ರೀ ಎನ್. ಸಂಪಂಗಿ : ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ ಗಡಿನಾಡು ಪ್ರದೇಶಗಳಲ್ಲಿ ಬಸ್‌ನ ಸೌಕರ್ಯ ಇಲ್ಲದೆ ಇರುವುದರಿಂದ ಇಲ್ಲಿನ ವಿದ್ಯಾರ್ಥಿಗಳು ಕಾಲೇಜುಗಳಿಗೆ ಸುಮಾರು ಕಿ.ಮೀ. ದೂರದವರೆಗೆ ನಡೆದುಕೊಂಡು ಬರಬೇಕಾಗುತ್ತದೆ, ಆದ್ದರಿಂದ, ಒಂದೊಂದು ಪಂಚಾಯತ್ ವ್ಯಾಪ್ತಿಗೆ ಒಂದೊಂದು ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೆಯೇ ಗಡಿನಾಡು ಪ್ರದೇಶದಲ್ಲಿನ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತನ್ನು ಕೊಡುವುದರ ಬಗ್ಗೆ ತಾವು ಗಮನದಲ್ಲಿಟ್ಟುಕೊಂಡು ಆ ಕೆಲಸವನ್ನು ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.

ಬೆಳ್ತಂಗಡಿಯಲ್ಲಿ ಶಾಲೆಯನ್ನು ಸರ್ಕಾರದ ಸುಪರ್ದಿಗೆ ನೀಡುವ ಬಗ್ಗೆ

40 (178) ಶ್ರೀ ವಸಂತ ಬಂಗೇರ (ಬೆಳ್ತಂಗಡಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಶ್ರೀ ಶಾರದಾ ಅನುದಾನಿತ ಶಾಲೆಯನ್ನು ಸರ್ಕಾರ ವಹಿಸಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;